Akashvani: Bangalore
National Bulletin In Kannada
08.08.2026: 7.35AM
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
08.08.2026: 7.35AM
**********

**ಮುಖ್ಯಾಂಶಗಳು :**

1. ಐಐಟಿ ದೆಹಲಿಯ ೫೭ನೇ ಘಟಿಕೋತ್ಸವ ಸಮಾರಂಭದಲ್ಲಿಂದು ಭಾಗವಹಿಸಲಿರುವ ಪ್ರಧಾನಿ ನರೇಂದ್ರ ಮೋದಿ; 'ಪರಂ ಪ್ರಗ್ಯಾ' ಸೌಲಭ್ಯ ಉದ್ಘಾಟನೆ
2. ಮೂರು ವರ್ಷಗಳಲ್ಲಿ ಒಂದು ಸಾವಿರ ಕಿಲೋಮೀಟರ್ ಕ್ವಾಂಟಮ್ ಸಂವಹನ ಸಾಧಿಸಿದ ಭಾರತ - ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಶ್ಲಾಘನೆ
3. ಪ್ರಸ್ತಾಪಿತ ವಿದೇಶಿ ಕೊಡುಗೆ ನಿಯಂತ್ರಣ ತಿದ್ದುಪಡಿ ಮಸೂದೆ ಕುರಿತ ಅಮೆರಿಕ ಸಂಸದರ ಆಕ್ಷೇಪ ತಿರಸ್ಕರಿಸಿದ ಭಾರತ
4. ಭೂತಾನ್ ಹಾಗೂ ಶ್ರೀಲಂಕಾದೊಂದಿಗೆ ವಿದ್ಯುತ್ ವಲಯದಲ್ಲಿ ದ್ವಿಪಕ್ಷೀಯ ಸಹಕಾರ ವೃದ್ಧಿಗಾಗಿ ಭಾರತ ಬದ್ಧತೆ
5. ಕೊರಿಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್: ಸೆಮಿಫೈನಲ್‌ನಲ್ಲಿಂದು ಭಾರತದ ಅಶ್ಮಿತಾ ಚಲಿಹಾ - ರಕ್ಷಿತಾ ರಾಮರಾಜ್ ಮುಖಾಮುಖಿ

************

ಭಾರತೀಯ ತಂತ್ರಜ್ಞಾನ ಸಂಸ್ಥೆ ಐಐಟಿ ದೆಹಲಿಯ ೫೭ನೇ ಘಟಿಕೋತ್ಸವ ಸಮಾರಂಭವನ್ನು ಉದ್ದೇಶಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಭಾಷಣ ಮಾಡಲಿದ್ದಾರೆ. ಈ ಸಮಾರಂಭದಲ್ಲಿ ಸ್ನಾತಕ, ಸ್ನಾತಕೋತ್ತರ ಹಾಗೂ ೫೮೭ ಪಿಎಚ್‌ಡಿ ಸಂಶೋಧಕರು ಸೇರಿದಂತೆ ಒಟ್ಟು ಮೂರು ಸಾವಿರಕ್ಕೂ ಹೆಚ್ಚು ಪದವೀಧರರು ಭಾಗವಹಿಸಲಿದ್ದಾರೆ. ಐಐಟಿ ದೆಹಲಿಯ ನಿರ್ದೇಶಕ ರಂಗನ್ ಬ್ಯಾನರ್ಜಿ ಅವರು ಮಾಧ್ಯಮಗೋಷ್ಠಿಯಲ್ಲಿ ಮಾಹಿತಿ ನೀಡಿ, ಪ್ರಧಾನಿ ಅವರು, ಸಂಸ್ಥೆಯ ಪ್ರತಿಷ್ಠಿತ 'ರಾಷ್ಟ್ರಪತಿಗಳ ಚಿನ್ನದ ಪದಕ', 'ನಿರ್ದೇಶಕರ ಚಿನ್ನದ ಪದಕ', 'ಶಂಕರ್ ದಯಾಳ್ ಶರ್ಮಾ ಚಿನ್ನದ ಪದಕ' ಹಾಗೂ 'ಪರ್ಫೆಕ್ಟ್ ಟೆನ್ ಚಿನ್ನದ ಪದಕ'ಗಳನ್ನು ಸಾಧಕ

ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ. ಇದೇ ವೇಳೆ, ಐಐಟಿ ದೆಹಲಿಯ ಸೋನಿಪತ್ ಆವರಣದಲ್ಲಿ ಸ್ಥಾಪಿಸಲಾಗಿರುವ ಕೃತಕ ಬುದ್ಧಿಮತ್ತೆ ಆಧಾರಿತ ಉನ್ನತ ಸಾಮರ್ಥ್ಯದ ಸೂಪರ್ ಕಂಪ್ಯೂಟಿಂಗ್ ಸೌಲಭ್ಯ 'ಪರಮ್ ಪ್ರಗ್ಯಾ'ವನ್ನು ಪ್ರಧಾನಿ ಅವರು ವರ್ಚುವಲ್ ಮೂಲಕ ಉದ್ಘಾಟಿಸಲಿದ್ದಾರೆ. ಈ ಅತ್ಯಾಧುನಿಕ ಸೌಲಭ್ಯವು ಎಐ, ಡೇಟಾ ಸೈನ್ಸ್ ಹಾಗೂ ಸುಧಾರಿತ ಸಂಶೋಧನಾ ಕ್ಷೇತ್ರಗಳಲ್ಲಿ ಸಂಸ್ಥೆಯ ಸಾಮರ್ಥ್ಯವನ್ನು ಗಣನೀಯವಾಗಿ ಹೆಚ್ಚಿಸಲಿದೆ. ಇದರ ಜೊತೆಗೆ, ದೇಶಾದ್ಯಂತ ಇರುವ ೧೮ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಗಳೊಂದಿಗೆ ಐಐಟಿ ದೆಹಲಿ ತಿಳುವಳಿಕಾ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ರಾಷ್ಟ್ರೀಯ ಶೈಕ್ಷಣಿಕ ಹಾಗೂ ಸಂಶೋಧನಾ ಸಹಕಾರ ಜಾಲಕ್ಕೆ ಚಾಲನೆ ನೀಡಿದೆ. ಈ ಒಪ್ಪಂದದಿಂದಾಗಿ ಭಾಗಿದಾರ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಬೋಧಕರಿಗೆ ಜಂಟಿ ಸಂಶೋಧನೆ ಹಾಗೂ ಶೈಕ್ಷಣಿಕ ವಿನಿಮಯಕ್ಕೆ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. ಪ್ರಸ್ತುತ ಐಐಟಿ ದೆಹಲಿಯು ೩೦ ದೇಶಗಳ ಸಂಸ್ಥೆಗಳೊಂದಿಗೆ ೮೮ ಸಕ್ರಿಯ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಹೊಂದಿದ್ದು, ಜಾಗತಿಕ ವಿಶ್ವವಿದ್ಯಾಲಯಗಳೊಂದಿಗೆ ಶೈಕ್ಷಣಿಕ ಹಾಗೂ ಸಂಶೋಧನಾ ಬಾಂಧವ್ಯವನ್ನು ವೃದ್ಧಿಸುತ್ತಿದೆ.

************

ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಶಾ ರಾಷ್ಟ್ರೀಯ ನಗರ ಸಹಕಾರ ಹಣಕಾಸು ಮತ್ತು ಅಭಿವೃದ್ಧಿ ನಿಗಮ - ಎನ್‌ಯುಸಿಎಫ್‌ಡಿಸಿಯ ನೂತನ ಕಚೇರಿಯನ್ನು ಇಂದು ಮುಂಬೈನಲ್ಲಿ ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮದ ಭಾಗವಾಗಿ ಅವರು ಮಹಾರಾಷ್ಟ್ರದ ರಾಜ್ಯ ನಗರ ಸಹಕಾರ ಬ್ಯಾಂಕ್ ಒಕ್ಕೂಟಗಳು ಮತ್ತು ಜಿಲ್ಲಾ ಸಂಘಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ. ಇದೇ ವೇಳೆ ಎನ್‌ಯುಸಿಎಫ್‌ಡಿಸಿ ಮತ್ತು ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯದ ನಡುವೆ ತಿಳುವಳಿಕಾ ಒಪ್ಪಂದ ವಿನಿಮಯವಾಗಲಿದ್ದು, ಈ ಸಹಭಾಗಿತ್ವವು ನಗರ ಸಹಕಾರ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಸೈಬರ್ ಭದ್ರತೆ, ತಾಂತ್ರಿಕ ಸಾಮರ್ಥ್ಯ ಹಾಗೂ ಸಾಂಸ್ಥಿಕ ದಕ್ಷತೆಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಬಳಿಕ ಸಚಿವರು, ನಗರ ಸಹಕಾರ ಬ್ಯಾಂಕುಗಳ ಸೈಬರ್ ಭದ್ರತೆಯನ್ನು ಬಲಪಡಿಸುವ ಉದ್ದೇಶದಿಂದ ಭದ್ರತಾ ಕಾರ್ಯಾಚರಣಾ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ.

************

ಕೇವಲ ಮೂರು ವರ್ಷಗಳಲ್ಲಿ ಭಾರತ ಒಂದು ಸಾವಿರ ಕಿಲೋಮೀಟರ್‌ಗೂ ಅಧಿಕ ದೂರದ ಸುರಕ್ಷಿತ ಕ್ವಾಂಟಮ್ ಸಂವಹನವನ್ನು ಸಾಧಿಸುವ ಮೂಲಕ ನಿಗದಿತ ಕಾಲಮಿತಿಗಿಂತ ಮುಂಚಿತವಾಗಿ ಮಹತ್ವದ ಮೈಲಿಗಲ್ಲು ಸ್ಥಾಪಿಸಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ನವದೆಹಲಿಯಲ್ಲಿ ನಡೆದ ಮೂರನೇ ಭಾರತ ಅಂತಾರಾಷ್ಟ್ರೀಯ ಫಿನ್‌ಟೆಕ್ ಉತ್ಸವ ಉದ್ದೇಶಿಸಿ ಮಾತನಾಡಿದ ಅವರು, ಬ್ಯಾಂಕಿಂಗ್ ಕ್ಷೇತ್ರ, ಹಣಕಾಸು ಸಂಸ್ಥೆಗಳು ಮತ್ತು ತಂತ್ರಜ್ಞಾನ ನವೋದ್ಯಮಗಳ ನಿಕಟ ಸಹಕಾರದಿಂದ ಫಿನ್‌ಟೆಕ್ ವಲಯ ದೇಶದ ಆರ್ಥಿಕ ಪರಿವರ್ತನೆಯ ಪ್ರಮುಖ ಚಾಲಕ ಶಕ್ತಿಯಾಗಿ ಹೊರಹೊಮ್ಮಿದೆ ಎಂದರು.

ರಾಷ್ಟ್ರೀಯ ಕ್ವಾಂಟಮ್ ಮಿಷನ್ ಮೂಲಕ ಕ್ವಾಂಟಮ್ ಕಂಪ್ಯೂಟಿಂಗ್, ಸಂವಹನ, ಕ್ವಾಂಟಮ್ ಸಂವೇದನೆ ಮತ್ತು ಕ್ವಾಂಟಮ್ ಸಾಮಗ್ರಿ ವಿಭಾಗಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ದೇಶ ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನ, ಸೈಬರ್ ಭದ್ರತೆ ಮತ್ತು ಬ್ಲಾಕ್ ಚೈನ್‌ನಂತಹ ಉದಯೋನ್ಮುಖ ತಂತ್ರಜ್ಞಾನಗಳ ಆಧಾರದ ಮೇಲೆ ಬುದ್ಧಿವಂತ ಹಾಗೂ ಸುರಕ್ಷಿತ ಹಣಕಾಸು ಪರಿಸರ ವ್ಯವಸ್ಥೆ ನಿರ್ಮಿಸುವ ಅಗತ್ಯವಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

************

ಜೆಪಿಎಸ್‌ಸಿ ಮತ್ತು ಜೆಎಸ್‌ಎಸ್‌ಸಿ ಪರೀಕ್ಷಾ ಅಕ್ರಮ ಖಂಡಿಸಿ ಪ್ರತಿಭಟಿಸುತ್ತಿರುವ ವಿದ್ಯಾರ್ಥಿ ನಿಯೋಗದೊಂದಿಗೆ ಜಾರ್ಖಂಡ್ ಸರ್ಕಾರ ಮೊದಲ ಹಂತದ ಅಧಿಕೃತ ಮಾತುಕತೆ ನಡೆಸಿದೆ. ನೇಮಕಾತಿ ಪರೀಕ್ಷೆಗಳಲ್ಲಿ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತ ತನಿಖೆಗೆ ವಿದ್ಯಾರ್ಥಿಗಳು ಆಗ್ರಹಿಸಿದ್ದು, ಸರ್ಕಾರವನ್ನು ಪ್ರತಿನಿಧಿಸಿದ್ದ ನಾಲ್ವರು ಸಚಿವರು ಮತ್ತು ಅಭಿವೃದ್ಧಿ ಆಯುಕ್ತರು ಈ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದ್ದಾರೆ. ಲಿಖಿತ ನಿರ್ಧಾರ ಮತ್ತು ದೃಢ ಕ್ರಮ ಪ್ರಾರಂಭಿಸುವ ವರೆಗೆ ಧರಣಿ ಮುಂದುವರಿಸುವುದಾಗಿ ತಿಳಿಸಿರುವ ವಿದ್ಯಾರ್ಥಿಗಳು ಇದೇ ೧೦ರೊಳಗೆ ಪರಿಹಾರ ಸಿಗದಿದ್ದರೆ ವಿಧಾನಸೌಧ ಮುತ್ತಿಗೆ ಹಾಕುವುದಾಗಿ ಎಚ್ಚರಿಸಿದ್ದಾರೆ. ಮತ್ತೊಂದೆಡೆ ಇದೇ ೧೩ರೊಳಗೆ ಸರ್ಕಾರ ಕ್ರಮ ಕೈಗೊಳ್ಳದಿದ್ದರೆ ಸಿಬಿಐ ತನಿಖೆಗೆ ಒತ್ತಾಯಿಸುವುದಾಗಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ತಿಳಿಸಿದ್ದಾರೆ. ಪರೀಕ್ಷಾ ಅಕ್ರಮದ ತನಿಖೆ ನಡೆಸುತ್ತಿರುವ ಸಿಐಡಿ ಈಗಾಗಲೇ ೧೯ ಜನರನ್ನು ಬಂಧಿಸಿದ್ದು, ಜಾರ್ಖಂಡ್ ಸಾರ್ವಜನಿಕ ಸೇವಾ

ಆಯೋಗದ ಮೂವರು ಹಾಲಿ ಸದಸ್ಯರಿಗೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಮಾಡಿದೆ.

************

ಪ್ರಸ್ತಾಪಿತ ವಿದೇಶಿ ಕೊಡುಗೆ ನಿಯಂತ್ರಣ ತಿದ್ದುಪಡಿ - ಎಫ್‌ಸಿಆರ್‌ಎ ಮಸೂದೆಯ ಕುರಿತು ಅಮೆರಿಕದ ಸಂಸದರೊಬ್ಬರು ಎತ್ತಿರುವ ಆಕ್ಷೇಪಗಳನ್ನು ಭಾರತ ತಿರಸ್ಕರಿಸಿದೆ. ಶಾಸಕಾಂಗದ ವಿಷಯಗಳು ದೇಶದ ಆಂತರಿಕ ವಿಚಾರವಾಗಿದ್ದು, ಈ ಬಗ್ಗೆ ಭಾರತದ ಸಂಸತ್ತು ನಿರ್ಧಾರ ಕೈಗೊಳ್ಳುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸ್ಪಷ್ಟಪಡಿಸಿದ್ದಾರೆ. ಅಮೆರಿಕ ಸೇರಿದಂತೆ ಹಲವು ರಾಷ್ಟ್ರಗಳು ವಿದೇಶಿ ಹಣದ ಹರಿವನ್ನು ನಿಯಂತ್ರಿಸುವ ಕಾನೂನುಗಳನ್ನು ಹೊಂದಿವೆ ಎಂಬುದನ್ನು ಅವರು ನೆನಪಿಸಿದ್ದಾರೆ. ಇದೇ ವೇಳೆ, ಗಲ್ಫ್ ಪ್ರದೇಶದಲ್ಲಿ ಭಾರತೀಯ ಹಡಗುಗಳು ಮತ್ತು ನಾವಿಕರ ಸುರಕ್ಷತೆಗೆ ಸರ್ಕಾರ ಗರಿಷ್ಠ ಆದ್ಯತೆ ನೀಡಿದ್ದು, ದಿನದ ೨೪ ಗಂಟೆಯೂ ಕಾರ್ಯನಿರ್ವಹಿಸುವ ಸಹಾಯವಾಣಿಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಅಂತಾರಾಷ್ಟ್ರೀಯ ಜಲಮಾರ್ಗಗಳಲ್ಲಿ ನಾಗರಿಕ ಹಡಗುಗಳನ್ನು ಗುರಿಯಾಗಿಸದಂತೆ ಮನವಿ ಮಾಡಿರುವ ಅವರು, ಪಾಕಿಸ್ತಾನ, ಟರ್ಕಿ, ಸೌದಿಅರೇಬಿಯಾ ಮತ್ತು ಸೊಮಾಲಿಯಾ ನಡುವಿನ ಇತ್ತೀಚಿನ ರಕ್ಷಣಾ ಒಪ್ಪಂದಗಳ ಬೆಳವಣಿಗೆಗಳನ್ನು ಭಾರತ ನಿಕಟವಾಗಿ ಗಮನಿಸುತ್ತಿದೆ ಎಂದಿದ್ದಾರೆ.

************

ವಿದ್ಯುತ್ ವಲಯದಲ್ಲಿನ ತಮ್ಮ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಬದ್ಧತೆಯನ್ನು ಭಾರತ ಮತ್ತು ಭೂತಾನ್ ಪುನರುಚ್ಚರಿಸಿವೆ. ನವದೆಹಲಿಯಲ್ಲಿ ನಿನ್ನೆ ನಡೆದ ಉನ್ನತ ಮಟ್ಟದ ದ್ವಿಪಕ್ಷೀಯ ಸಭೆಯಲ್ಲಿ ಕೇಂದ್ರ ವಿದ್ಯುತ್ ಸಚಿವ ಮನೋಹರ್ ಲಾಲ್ ಹಾಗೂ ಭೂತಾನ್ ಇಂಧನ ಮತ್ತು ನೈಸರ್ಗಿಕ ಸಂಪನ್ಮೂಲ ಸಚಿವ ಲಿಯೋಂಪೊ ಗೆಮ್ ತ್ಸೆರಿಂಗ್ ಅವರು ಭಾಗವಹಿಸಿ, ಉಭಯ ದೇಶಗಳ ಇಂಧನ ಪಾಲುದಾರಿಕೆಯ ಕುರಿತು ಸುದೀರ್ಘ ಚರ್ಚೆ ನಡೆಸಿದ್ದಾರೆ. ಇದೇ ರೀತಿ ನಿನ್ನೆ ನವದೆಹಲಿಯಲ್ಲಿ ಭಾರತ ಮತ್ತು ಶ್ರೀಲಂಕಾ ಕೂಡ ವಿದ್ಯುತ್ ವಲಯದಲ್ಲಿ ದ್ವಿಪಕ್ಷೀಯ ಸಹಕಾರ ವೃದ್ಧಿಸುವ ಕುರಿತು ಸಭೆ ನಡೆಸಿದೆ. ಸಭೆಯಲ್ಲಿ ಶ್ರೀಲಂಕಾ ಇಂಧನ ಸಚಿವ ಅನುರಾ ಕರುಣತಿಲಕೆ ಹಾಗೂ ಸಚಿವ ಮನೋಹರ್ ಲಾಲ್ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ ಪ್ರಸ್ತಾಪಿತ

ಭಾರತ-ಶ್ರೀಲಂಕಾ ಎಚ್‌ವಿಡಿಸಿ ಸಂಪರ್ಕಜಾಲ ಹಾಗೂ ಸಂಪೂರ್ ಸೌರ ವಿದ್ಯುತ್ ಯೋಜನೆಗಳನ್ನು ಪ್ರಗತಿಯನ್ನು ಪರಿಶೀಲಿಸಲಾಯಿತು.

************

ಐವರಿ ಕೋಸ್ಟ್ ದೇಶದ ೬೬ನೇ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆಫ್ರಿಕನ್ ರಾಷ್ಟ್ರದೊಂದಿಗಿನ ಭಾರತದ ಸುದೀರ್ಘ ಹಾಗೂ ಆತ್ಮೀಯ ದ್ವಿಪಕ್ಷೀಯ ಬಾಂಧವ್ಯವನ್ನು ಸ್ಮರಿಸಿದ ಅವರು, ಐವರಿ ಕೋಸ್ಟ್ ಜೊತೆಗಿನ ಸ್ನೇಹ ಸಂಬಂಧಕ್ಕೆ ಭಾರತ ಗರಿಷ್ಠ ಮೌಲ್ಯ ನೀಡುತ್ತದೆ ಎಂದು ಹೇಳಿದರು. ಈ ಕವಾಯತಿನಲ್ಲಿ ಭಾರತೀಯ ಸಶಸ್ತ್ರ ಪಡೆಗಳ ತುಕಡಿ ಭಾಗವಹಿಸಿರುವುದು ಎರಡೂ ದೇಶಗಳ ನಡುವಿನ ಸ್ನೇಹ ಹಾಗೂ ಸೌಹಾರ್ದತೆಗೆ ಪ್ರತಿಬಿಂಬವಾಗಿದೆ ಎಂದು ಸಚಿವರು ಬಣ್ಣಿಸಿದರು.

************

ದಕ್ಷಿಣ ಕೊರಿಯಾದ ಅಸಾನ್‌ನಲ್ಲಿ ನಡೆಯುತ್ತಿರುವ ಕೊರಿಯಾ ಮಾಸ್ಟರ್ಸ್ ೨೦೨೬ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿಂದು ಭಾರತದ ಅಶ್ಮಿತಾ ಚಲಿಹಾ ಮತ್ತು ರಕ್ಷಿತಾ ರಾಮರಾಜ್ ಪರಸ್ಪರ ಮುಖಾಮುಖಿಯಾಗಲಿದ್ದಾರೆ. ನಿನ್ನೆ ನಡೆದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ರಕ್ಷಿತಾ, ಭಾರತದವರೇ ಆದ ತಾನ್ವಿ ಶರ್ಮಾ ವಿರುದ್ಧ ಗೆಲುವು ದಾಖಲಿಸಿ ಮುನ್ನಡೆದರೆ, ಅಶ್ಮಿತಾ ಚಲಿಹಾ, ಜಪಾನ್‌ನ ಹಿನಾ ಅಕೇಚಿ ವಿರುದ್ಧ ಗೆಲುವು ದಾಖಲಿಸಿ ಅಂತಿಮ ನಾಲ್ಕರ ಘಟ್ಟ ಪ್ರವೇಶಿಸಿದರು. ಇನ್ನುಳಿದ ವಿಭಾಗಗಳಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

************

ದೇಶದ ಹಲವು ಭಾಗಗಳಲ್ಲಿಂದು ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದೇಶದ ವಾಯವ್ಯ, ಈಶಾನ್ಯ, ಮಧ್ಯ, ಪೂರ್ವ, ಪಶ್ಚಿಮ ಮತ್ತು ಪರ್ಯಾಯ ದ್ವೀಪಗಳಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಗುಡುಗು, ಮಿಂಚು ಬಿರುಗಾಳಿ ಸಹಿತ ಮಳೆಯಾಗುವ ನಿರೀಕ್ಷೆ ಇದ್ದು, ತಗ್ಗು ಪ್ರದೇಶಗಳು ಹಾಗೂ ನೀರು ನಿಲ್ಲುವ ಸೂಕ್ಷ್ಮ ಪ್ರದೇಶಗಳ ಜನರು ಜಾಗರೂಕರಾಗಿರಲು ಇಲಾಖೆ ಎಚ್ಚರಿಸಿದೆ.

******END******